ಇ) ಈ ಊರಿಗೆ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು (ಎನ್.ಆರ್.ಡಬ್ಲ್ಯೂ.ಎಸ್) ಯೋಜನೆಯ ಅಂದಾಜು ಪಟ್ಟಿಗೆ ೩೧-೩-೮೦ ರಲ್ಲಿ ಆಡಳಿತಾತ್ಮಕ ಮಂಜೂರಾತಿ ದೊರಕಿದ್ದು, ದಿನಾಂಕ ೨೯-೪-೮೦ ರಲ್ಲಿ ತಾಂತ್ರಿಕ ಮಂಜೂರಾತಿ ಕೊಡಲಾಗಿದೆ, ಈ ಯೋಜನೆಯಲ್ಲಿ ಕೊಳವೆ ಬಾವಿಗಳು ವಿಫಲಗೊಂಡಿದ್ದರಿಂದ ಜಲಮೂಲವನ್ನು ಸ್ಥಿರಪಡಿಸಲಾಗಿರುವುದಿಲ್ಲ. ಆದಕಾರಣ ಈ ಯೋಜನೆಯ ಇತರ ಕಾಮಗಾರಿಗಳನ್ನು ಪ್ರಾರಂಭಿಸಲಾಗಿಲ್ಲ.

ಆದುದರಿಂದ ಮಲಪ್ರಭಾ ನದಿಯ ನೀರನ್ನು ಜಲ ಮೂಲವನ್ನಾಗಿ ಪರಿಗಣಿಸಿ, ಸುತಗಟ್ಟಿ ಮತ್ತು ಹಿಟ್ಟಿನಗಿ ಗ್ರಾಮಗಳಿಗೆ ಸಂಯುಕ್ತ ನೀರು ಸರಬರಾಜು ಯೋಜನೆ ಮಾಡಿರುತ್ತದೆ. ಇದರ ಅಂದಾಜು ಪಟ್ಟಿ ತಯಾರುಮಾಡಿ, ಇದು ಮಂಜೂರು ಮಾಡುವ ಹಂತದಲ್ಲಿರುತ್ತದೆ. ಈ ಸಂಯುಕ್ತ ಯೋಜನೆಗೆ ೧೯೮೬-೮೭ನೇ ಸಾಲಿನ ಆಯವ್ಯಯದಲ್ಲಿ ರೂ. ೩.೨೦ ಲಕ್ಷಗಳ ಅನುದಾನವಿದ್ದು. ಮುಂದಿನ ವರ್ಷದ ಅಂತ್ಯದೊಳಗೆ ಪೂರ್ಣಗೊಳ್ಳಲಾಗುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ.—ಅಧ್ಯಕ್ಷರೇ, ೧೯೮೦ರಲ್ಲಿ ಈ ಸ್ಕೀಮು ಮಂಜೂರಾಗಿದ್ದು ಕಳೆದ ೫ ವರ್ಷಗಳಿಂದ ಈ ಜನರಿಗೆ ನೀರು ಸಿಕ್ಕಿಲ್ಲ, ತಮ್ಮ ಪರದಿಯ ಪ್ರಕಾರ ಅಲ್ಲಿ ೪ ಕೊಳವೆ ಬಾವಿಗಳು ಇದ್ದರೂ ಆವುಗಳಲ್ಲಿ ೨ರಲ್ಲಿ ಮಾತ್ರ ನೀರು ಬರುತ್ತಿದೆ. ಅಲ್ಲಿ ಸೈಕ್ಲೋನ್ ರಿಗ್ ತರಿಸಿ ಬಾವಿ ಕೊರೆಯಬೇಕೆಂದು ಎಷ್ಟೋ ಅರ್ಜಿ ಕೊಟ್ಟಿದ್ದರೂ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ. ಕೇವಲ ೨ ಫರ್ಲಾಂಗ್ ದೂರದಲ್ಲಿ ಮಲಪ್ರಭಾ ಹೊಳೆ ಇದ್ದರೂ ಕೂಡಾ ಹುಬ್ಬಳ್ಳಿ-ಧಾರವಾಡಕ್ಕೆ ೬೦ ಕಿ.ಮೀ. ನೀರು ತೆಗೆದುಕೊಂಡು ಹೋಗಿ ಕೊಡುತ್ತಿದ್ದಾರೆ. ಆದ್ದರಿಂದ ಕೂಡಲೇ ಸೈಕ್ಲೋನ್ ರಿಗ್ ತರಿಸಿ ನೀರನ್ನು ಕೊಡುವ ವ್ಯವಸ್ಥೆಯಾಗಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.—ಸಭಾಪತಿಯವರೆ, ಸೈಕ್ಲೋನ್ ರಿಗ್ಸ್ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ಅವನ್ನು ತರಬೇಕಾದರೆ ಅಲ್ಲಿ ಜಿಯೋಫಿಸಿಕಲ್ ಸರ್ವೇ ಮಾಡಿ ಅದರ ಅಗತ್ಯ ಇದ್ದರೆ ಕಳುಹಿಸಲಾಗುತ್ತದೆ. ಈಗಾಗಲೇ ಅಲ್ಲಿಗೆ ನೀರು ಒದಗಿಸುವ ಬಗ್ಗೆ ಯೋಜನೆ ಮಾಡಿದ್ದು ಈ ವರ್ಷ ಮೂರೂವರೆ ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಮಲಪ್ರಭಾದಿಂದ ನೀರು ಕೊಡತಕ್ಕ ಈ ಯೋಜನೆಯನ್ನು ಈ ವರ್ಷದ ಕೊನೆಯೊಳಗೆ ಮುಗಿಸಿಕೊಡುತ್ತೇವೆ.

ಅಧ್ಯಕ್ಷರು.—ಮಲ್ಲಾರಿಗೌಡ ಪಾಟೀಲರೇ, ನಿಮ್ಮ ಪ್ರಶ್ನೆಯನ್ನು ಮುಂದಕ್ಕೆ ಹಾಕಿದ್ದೇವೆ.

ಶ್ರೀ ಎಂ. ಎಸ್. ಪಾಟೀಲ್.—ಮುಂದೂಡಲು ಕಾರಣವೇನು ?

ಅಧ್ಯಕ್ಷರು.—ಹಲವಾರು ಕಾರಣಗಳು ಇರುತ್ತವೆ.

ಶ್ರೀ ಎಂ. ಎಸ್, ಪಾಟೀಲ್.—ಎಷ್ಟು ದಿವಸಗಳಲ್ಲಿ ಉತ್ತರವನ್ನು ಕೊಡಿಸುತ್ತೀರಿ ?

ಅಧ್ಯಕ್ಷರು.—ಆದಷ್ಟು ಬೇಗ.

ನೀರಂ ಸರಬರಾಜಂ ಯೋಜನೆಯ ಬದಲಾವಣೆ

೭೧ (೧೫೨) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ಪಕ್ಷೇತರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕರ್ನಾಟಕ ನಗರ ನೀರು ಪೂರೈಕೆ ಮಂಡಳಿಯವರು ಬೀಳಗಿ ಗ್ರಾಮಕ್ಕೆಂದು ಸಿದ್ಧಪಡಿಸಿದ ನೀರು ಪೂರೈಕೆ ಯೋಜನೆಯನ್ನು ಜನಾರೋಗ್ಯ ಶಿಲ್ಪಕಾರ್ಯ ವಿಭಾಗಕ್ಕೆ ವರ್ಗಾಯಿಸುವ ಕುರಿತು ಜಿಲ್ಲಾ ಅಭಿವೃದ್ಧಿ ಮಂಡಳಿಯ ನಿರ್ಣಯ ಸ್ವೀಕರಿಸಿಲ್ಲವೇ ?

ಆ) ಹಾಗಿದ್ದಲ್ಲಿ ಯೋಜನೆಯ ಅಂದಾಜು ಪೆಚ್ಚಾವೆಷ್ಟು, ಹಾಗೂ ಕೆಲಸ ಯಾವಾಗ ಪ್ರಾರಂಭವಾಗುತ್ತದೆ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ಪಕ್ಷೇತರ ಮಂತ್ರಿಗಳು).—

ಅ) ಬೀಳಗಿಗೆ ಕುಡಿಯುವ ನೀರಿನ ಪೂರೈಕೆ ಕರ್ನಾಟಕ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿ ಬಿಜಾಪುರ ಇವರ ಅಧೀನದಲ್ಲಿರುತ್ತದೆ. ಆದರೆ, ಬಿಜಾಪುರ ಜಿಲ್ಲಾ ಅಭಿವೃದ್ಧಿ ಮಂಡಳಿಯು

೨ನೇಯ ತ್ರೈಮಾಸಿಕ ಸಾಮಾನ್ಯ ಸಭೆ ದಿನಾಂಕ ೧೦-೧೦-೮೬ ರಲ್ಲಿ ಜರುಗಿದ ಸಭೆಯಲ್ಲಿ ಇದನ್ನು ಜನಾರೋಗ್ಯ ಶಿಲ್ಪಿಕಾರ್ಯ ವಿಭಾಗಕ್ಕೆ ವರ್ಗಾಯಿಸಬೇಕೆಂದು ನಿರ್ಣಯಿಸಿರುವುದು ತಿಳಿದುಬಂದಿದೆ. ಆದರೆ, ಪ್ರಸ್ತಾವನೆ ಬಂದಿಲ್ಲ.

ಆ) ಪ್ರಸ್ತಾವನೆ ಬಂದನಂತರ ಪರಿಶೀಲಿಸಲಾಗುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ). ಈಗ ಏನಾಗಿದೆ ಅಂದರೆ ಬೀಳಗಿ ಗ್ರಾಮ ಪುರಸಭೆ ವ್ಯಾಪ್ತಿಯಲ್ಲಿತ್ತು. ಈಗ ಜನಸಂಖ್ಯೆಗನುಗುಣವಾಗಿ ೧೨ ಸಾವಿರ ಜನ ಸಂಖ್ಯೆ ಇರುವುದರಿಂದ ಮಂಡಲ ಪಂಚಾಯಿತಿ ಆಗಿ ಪರಿವರ್ತನೆಯಾಗಿದೆ. ಬೀಳಗಿ ಮಂಡಲ ಪಂಚಾಯಿತಿ ಆಗಬಾರದಾಗಿತ್ತು, ಪುರಸಭೆಯೇ ಆಗಬೇಕಾಗಿತ್ತು. ಮುಳುಗಡೆಯಾದ ಪ್ರದೇಶದ ಜನರಿಗೆ ಆಲ್ಲಿ ನಾನೂರು ಪುನರ್‌ವಸತಿ ಗಳನ್ನು ಮಾಡಲಾಗುತ್ತಿದೆ. ಹಿಂದೆ ನಗರಾಭಿವೃದ್ಧಿ ಮಂತ್ರಿಗಳು ಕರ್ನಾಟಕ ನೀರು ಪೂರೈಕೆ ಮತ್ತು ಒಳಚರಂಡಿ ಮಂಡಳಿಗೆ ಹೇಳಿ ಬೇಗ ಮಾಡಿಸುತ್ತೇನೆಂದು ಹೇಳಿದ್ದರು. ಈಗ ಬೀಳಗಿ ಮಂಡಲ ಪಂಚಾಯಿತಿ ಆಗಿ ಪರಿವರ್ತನೆ ಗೊಂಡಿರುವುದರಿಂದ ಯಾರು ನೀರು ಪೂರೈಕೆ ಮಾಡಬೇಕು? ದಿನಾಂಕ ೧೦-೧೦-೮೬ರ ಜಿಲ್ಲಾ ಅಭಿವೃದ್ಧಿ ಮಂಡಳಿಯ ಈ ಕೆಲಸವನ್ನು ಜನಾರೋಗ್ಯ ಶಿಲ್ಪಕಾರ್ಯ ವಿಭಾಗಕ್ಕೆ ವರ್ಗಾಯಿಸಬೇಕೆಂದು ಕೊನೆಯ ಸಭೆಯಲ್ಲಿ ನಿರ್ಣಯ ಮಾಡಲಾಗಿದೆ. ೧೦-೧೦-೮೬ರಲ್ಲಿ ಮಾಡಿದಂತಹ ನಿರ್ಣಯ ಬೆಂಗಳೂರಿನ ಹೆಚ್. ಯು. ಡಿ. ಡಿಪಾರ್ಟ್‌ಮೆಂಟ್‌ನಲ್ಲಿ ಬಂದು ಕುಳಿತಿದೆ. ಬೀಳಗಿಯಲ್ಲಿರತಕ್ಕ ಬಾವಿಗಳಿಂದ ನೀರನ್ನು ಸಪ್ಲೈ ಮಾಡುವುದಕ್ಕೆ ಆಗುವುದಿಲ್ಲ. ಪಿ.ಹೆಚ್.ಇ. ಗೆ ವರ್ಗಾವಣೆ ಮಾಡಿದ ಮೇಲೆ ಸರ್ಕಾರದ ಅಧಿಕಾರಿಗಳು ೧೫ ಕಿಲೋಮೀಟರ್‌ನಿಂದ ನೀರನ್ನು ತರಲಿಕ್ಕೆ ಹೊರಟಿದ್ದಾರೆ. ೭ ಕಿಲೋಮಿಟರ್ ದೂರದಲ್ಲಿಯೇ ನೀರು ಸಿಗುವಾಗ ೧೫ ಕಿಲೋಮಿಟರ್‌ನಿಂದ ತರುವುದು ಸರಿಯಾಗುವುದಿಲ್ಲ. ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿದರೆ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ಉಳಿತಾಯವಾಗುತ್ತದೆ. ತಾವು ಅಧಿಕಾರಿಗಳಿಗೆ ಈ ಬಗ್ಗೆ ಹೇಳಬೇಕು. ಬರುವ ಬೇಸಿಗೆಯಲ್ಲಿ ಬಾರಿ ಪ್ರಮಾಣದ ನೀರಿನ ಅಭಾವವಾಗುತ್ತದೆ. ಬೀಳಗಿಗೆ ಕುಡಿಯುವ ನೀರನ್ನು ತಕ್ಷಣ ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಬೀಳಗಿ ಇದುವರೆಗೆ ನಗರಸಭೆಯಾಗಿತ್ತು. ಈಗ ಮಂಡಲ ಪಂಚಾಯಿತಿ ಆಗಿ ಪರಿವರ್ತನೆಯಾಗಿದೆ. ಜಿಲ್ಲಾ ಅಭಿವೃದ್ಧಿ ಮಂಡಳಿಯವರ ಸಭೆಯ ನಿರ್ಣಯ ನಮಗಿನ್ನು ಬಂದಿಲ್ಲ. ಇದನ್ನು ತರಿಸಿಕೊಳ್ಳಲಿಕ್ಕೆ ನಾನು ಅಧಿಕಾರಿಗಳಿಗೆ ಹೇಳುತ್ತೇನೆ. ಪಿ.ಹೆಚ್.ಇ. ಗೆ ತೆಗೆದುಕೊಂಡ ಮೇಲೆ ನೀರನ್ನು ಸರಬರಾಜು ಮಾಡುವಾಗ ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.—ಮಾನ್ಯ ಕೃಷ್ಣನ್‌ರವರ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ಮೈಸೂರು ಮಹಾನಗರಪಾಲಿಕೆಯ ಮೇಯರ್‌ರವರುಗಳ ವಿದೇಶ ಪ್ರವಾಸ ಬಗ್ಗೆ

೭೩. (೨೬) ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಕಳೆದ ಮೂರು ವರ್ಷಗಳಲ್ಲಿ ಮೈಸೂರಿನ ಎಷ್ಟು ಮೇಯರ್‌ರವರುಗಳು ವಿದೇಶಿ ಆಹ್ವಾನದ ಮೇಲೆ ಪ್ರವಾಸ ಕೈಗೊಂಡಿದ್ದರು.

ಆ) ಪ್ರತಿಯೊಬ್ಬ ಮೇಯರ್‌ರವರ ವಿದೇಶ ಪ್ರವಾಸಕ್ಕೆ ನಗರಪಾಲಿಕೆಯಿಂದ ಖರ್ಚು ಮಾಡಿದ ಹಣವೆಷ್ಟು?

ಇ) ಈ ಖರ್ಚುಗಳಿಗೆ ನಗರಪಾಲಿಕೆಯು ಅನುಮತಿ ನೀಡಿದೆಯೆ, ಅಧಿಕ ಖರ್ಚಿನ ಬಗ್ಗೆ ನಗರಪಾಲಿಕೆ ಅನುಮತಿ ನೀಡದಿರುವ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಇದರ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?

ಪ್ರೊ. ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಇಬ್ಬರು.